# ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ
## ಬೆಂಗಳೂರು

ವಿದ್ಯಾರ್ಥಿ/ ವಿದ್ಯಾರ್ಥಿನಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ

### ವಸತಿ ನಿಲಯದ ಪ್ರವೇಶಕ್ಕೆ ಅರ್ಜಿ

ಅರ್ಜಿ ಸಂಖ್ಯೆ.................................... ದೂರವಾಣಿ : 080–22266416

ರಶೀದಿ ಸಂಖ್ಯೆ............../ದಿನಾಂಕ...........

| | |
|---|---|
| 1. ವಿದ್ಯಾರ್ಥಿ/ವಿದ್ಯಾರ್ಥಿನಿ ಪೂರ್ಣ ಹೆಸರು ಹಾಗೂ ಮೊಬೈಲ್ ಸಂಖ್ಯೆ | |
| 2. ತಂದೆ/ತಾಯಿಯ ಹೆಸರು ಖಾಯಂ ವಿಳಾಸ/ ಮೊಬೈಲ್ ಸಂಖ್ಯೆ | |
| 3. ವಿದ್ಯಾರ್ಥಿ/ವಿದ್ಯಾರ್ಥಿನಿಯ ಹುಟ್ಟಿದ ದಿನಾಂಕ ಹಾಗೂ ವಯಸ್ಸು ನಮೂದಿಸುವುದು | |
| 4. ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಆಧಾರ್ ಕಾರ್ಡ್‌ನ ನಕಲು ಪ್ರತಿಯನ್ನು ಲಗತ್ತಿಸುವುದು | ಲಗತ್ತಿಸಿದೆ/ಲಗತ್ತಿಸಿಲ್ಲ |
| 5. ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸುವುದು | ಲಗತ್ತಿಸಿದೆ/ಲಗತ್ತಿಸಿಲ್ಲ |
| 6. ಹಿಂದೆ ಅಭ್ಯಾಸಿಸಿದ ಪದವಿ ತರಗತಿಯ ಅಂಕಪಟ್ಟಿ ಲಗತ್ತಿಸುವುದು | ಲಗತ್ತಿಸಿದೆ/ಲಗತ್ತಿಸಿಲ್ಲ |
| 7. ಪ್ರಸಕ್ತ ಪ್ರವೇಶ ಪಡೆದಿರುವ ತರಗತಿ ಬಗ್ಗೆ ಮಾಹಿತಿ ಒದಗಿಸುವುದು (ರಶೀದಿ ಇತ್ಯಾದಿ) | |
| 8. ವಿದ್ಯಾರ್ಥಿ/ವಿದ್ಯಾರ್ಥಿನಿಯು ನಿಲಯದಲ್ಲಿರತಕ್ಕ ಅವಧಿ | |
| 9. ಕೋವಿಡ್ –19 ರ RTPCR/ 72 ಘಂಟೆಯ ಒಳಗಡೆಯ ಅಧಿಕೃತ ವರದಿ | ಲಗತ್ತಿಸಿದೆ/ಲಗತ್ತಿಸಿಲ್ಲ |

ಮೇಲ್ಕಂಡ ಅವಶ್ಯಕ ಮಾಹಿತಿಗಳನ್ನೊದಗಿಸಿ ಸಂಸ್ಥೆಯ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಸಲ್ಲಿಸಿರುತ್ತೇನೆ. ಮೇಲೆ ಕೊಟ್ಟಿರುವ ವಿವರಗಳು ಸತ್ಯವಾದವುಗಳು, ಅವುಗಳಲ್ಲಿ ತಪ್ಪು ಕಂಡುಬಂದಲ್ಲಿ ಆಡಳಿತ ಮಂಡಳಿಯವರು ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ. ಹಾಗೂ ಸಂಸ್ಥೆಯು ಮುಂದೆ ಗೊತ್ತುಪಡಿಸುವ ನಿರ್ವಹಣಾ ವೆಚ್ಚವನ್ನು ನೀಡಲು ಒಪ್ಪಿರುತ್ತೇನೆ.

.........................................

(ವಿದ್ಯಾರ್ಥಿ/ವಿದ್ಯಾರ್ಥಿನಿ ಸಹಿ)

**<u>ಕಛೇರಿಯ ಉಪಯೋಗಕ್ಕಾಗಿ ಮಾತ್ರ</u>**

| | | |
|---|---|---|
| ................................ | ................................ | ................................ |
| **(ನಿರ್ದೇಶಕರು)** | **(ಕಾರ್ಯದರ್ಶಿಗಳು)** | **(ಅಧ್ಯಕ್ಷರು)** |
| **ಜೆ.ಎ.ಸಿ.ಇ.** | **ಕೆ.ವಿ.ವಿ.ಸಂಸ್ಥೆ** | **ಕೆ.ವಿ.ವಿ. ಸಂಸ್ಥೆ** |

ಸದರಿ ವಿದ್ಯಾರ್ಥಿ/ವಿದ್ಯಾರ್ಥಿನಿಯಿಂದ ಶುಲ್ಕ ರೂ: ........................ರಶೀದಿ ಸಂಖ್ಯೆ .................

ದಿನಾಂಕ............................ರ ಪ್ರಕಾರ 20....... – 20...........ನೇ ಸಾಲಿನ ಪ್ರವೇಶ ನೀಡಲಾಗಿದೆ.

**ಆಡಳಿತಾಧಿಕಾರಿಗಳು**

## ವಿದ್ಯಾರ್ಥಿ / ವಿದ್ಯಾರ್ಥಿನಿಯರು ಪಾಲಿಸಬೇಕಾದ ನಿಯಮಗಳು

1. ಬೆಂಗಳೂರಿನ ಜೆಎಸಿಇ ಕೋಚಿಂಗ ಸೆಂಟರನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ. ವಿದ್ಯಾರ್ಥಿಗಳ ಆಯ್ಕೆಯ ಜವಾಬ್ದಾರಿ ಸಂಪೂರ್ಣ ಆಡಳಿತ ಮಂಡಳಿಗೆ ಸೇರಿದ್ದು, ಆಯ್ಕೆಯಾದ ವಿದ್ಯಾರ್ಥಿ / ವಿದ್ಯಾರ್ಥಿನಿಯರು ನಿಗಧಿತ ದಿನಾಂಕದೊಳಗೆ ಸಂಸ್ಥೆಯ ನಿಗಧಿ ಮಾಡಲ್ಪಟ್ಟ ಮೊಬಲಗನ್ನು ಪಾವತಿಸಿ ಪ್ರವೇಶ ಪಡೆಯತಕ್ಕದ್ದು. ಪ್ರವೇಶ ಆ ಕೋರ್ಸಿಗೆ ಮಾತ್ರ ಸೀಮಿತವಾಗಿದ್ದು, ಮುಂದಿನ ಕೋರ್ಸಿಗೆ ಮತ್ತೆ ನಿಗಧಿತ ಫಾರಂ ಸಲ್ಲಿಸಿ ಪ್ರವೇಶ ಶುಲ್ಕ ಪಾವತಿಸಿ ಪ್ರವೇಶ ಪಡೆಯುವುದು. JACE ಸಂಸ್ಥೆಯಿಂದ ಲೈಬ್ರರಿ ಬುಕ್ಸ್ / ಇತ್ಯಾದಿ ಸೌಲಭ್ಯಗಳನ್ನು ಹಿಂದುರಿಗಿಸಿ NOC ಪಡೆದು ಹಾಸ್ಟೆಲ್ ತೆರವು ಮಾಡಬೇಕು. ಕೋರ್ಸಿನ ಪರೀಕ್ಷೆ ಮುಗಿದ ನಂತರ ವಿದ್ಯಾರ್ಥಿನಿಲಯವನ್ನು ಎರಡು ದಿನದಲ್ಲಿ ತೆರವು ಮಾಡಬೇಕು.

2. ವಿದ್ಯಾರ್ಥಿಗಳು ತಮ್ಮ ಕೊಠಡಿಗಳನ್ನು ತಾವೇ ಸ್ವಚ್ಛಮಾಡಿ ಕೊಳ್ಳುವುದು. ನಿಲಯದ ಆವರಣವನ್ನು ಮತ್ತು ಶೌಚ/ಸ್ನಾನದ ಗೃಹಗಳನ್ನು ಶುಚಿಯಾಗಿಡತಕ್ಕದ್ದು. ತಮ್ಮ ಕೊಠಡಿಗಳಲ್ಲಿ ಶುಚಿತ್ವವನ್ನು ಅಚ್ಚುಕಟ್ಟಾಗಿ ನೋಡಿಕೊಳ್ಳುವುದಲ್ಲದೆ ಕೊಠಡಿಯ ಮುಂಭಾಗದ ಕಾರಿಡಾರ್ ಪ್ರದೇಶವನ್ನು ಸಹ ಯಾವಾಗಲೂ ಶುಚಿಯಾಗಿಡುವಂತೆ ನೋಡಿಕೊಳ್ಳತಕ್ಕದ್ದು. ಶೌಚಾಲಯದಲ್ಲಿ ನೀರನ್ನು ಪೋಲು ಮಾಡದೇ ಯಾವಾಗಲೂ ಶುಚಿತ್ವವನ್ನು ಕಾಪಾಡಿಕೊಳ್ಳತಕ್ಕದ್ದು. ಸಂಸ್ಥೆಯು ಒಳವಡಿಸಿರುವ ವಸ್ತುಗಳನ್ನು ಎಚ್ಚರಿಕೆಯಿಂದ ಕಾಪಾಡತಕ್ಕದ್ದು ತಪ್ಪಿದಲ್ಲಿ ಅದರ ಪೂರ್ತಿ ಮೌಲ್ಯವನ್ನು ಸಂಬಂಧಪಟ್ಟವರಿಂದ ವಸೂಲು ಮಾಡಲಾಗುವುದು. ತಮ್ಮ ಬೇಜವಾಬ್ದಾರಿತನದಿಂದ ಶೌಚಾಲಯದಲ್ಲಿ ನೀರು ಹೊರಹೋಗದಂತೆ ಕಟ್ಟಿಕೊಂಡಲ್ಲಿ ಇತರೆ ರೀತಿ ಗಲೀಜು ಮಾಡಿದಲ್ಲಿ ಅದನ್ನು ಶುಚಿಗೊಳಿಸಲು ತಗಲುವ ಖರ್ಚು–ವೆಚ್ಚಗಳನ್ನು ಸಹ ತಮ್ಮಿಂದಲೇ ವಸೂಲು ಮಾಡಲಾಗುವುದು. ವಿದ್ಯುತ್ ಮತ್ತು ನೀರನ್ನು ಹಿತ–ಮಿತವಾಗಿ ಉಪಯೋಗಿಸತಕ್ಕದ್ದು.

3. ಪಾನ್ ಬೀಡ ಸೇವಿಸುವುದು, ಧೂಮಪಾನ, ಮದ್ಯಪಾನ, ಇಸ್ಪೀಟ್ ವಗೈರೆ ಯಾವುದೇ ಕೆಟ್ಟ ಅಭ್ಯಾಸಗಳಿಗೆ ಮತ್ತು ಕಾನೂನು ಬಾಹಿರ ಚಟುವಟಿಕೆಗಳಿಗೆ ನಿಲಯದಲ್ಲಿ ಅವಕಾಶವಿರುವುದಿಲ್ಲ. ಅಂತಹ ವಿದ್ಯಾರ್ಥಿಗಳನ್ನು ತಕ್ಷಣದಿಂದ ಹೊರಹಾಕಲಾಗುವುದು. ಯಾವುದೇ ರೀತಿಯ ಎಲೆಕ್ಟ್ರಿಕ್ ವಸ್ತುಗಳನ್ನು (ರೇಡಿಯೋ, ಇಸ್ತ್ರಿಪೆಟ್ಟಿಗೆ, ಎಲೆಕ್ಟ್ರಿಕ್ ಸ್ಟೌವ್, ಎಲೆಕ್ಟ್ರಿಕ್ ಕಾಯಲ್) ನಿಲಯದಲ್ಲಾಗಲಿ, ಕೊಠಡಿಗಳಲ್ಲಾಗಲಿ ಉಪಯೋಗಿಸುವುದನ್ನು ನಿಷೇಧಿಸಿದೆ. ಪ್ರಸಾದಕ್ಕೆ ಅನಧಿಕೃತವಾಗಿ ಗೈರು ಹಾಜರಾಗುವಂತಿಲ್ಲ. ಪ್ರಸಾದವನ್ನು ಹಾಳು ಮಾಡುವಂತಿಲ್ಲ. ಪ್ರಸಾದದ ಸಮಯದಲ್ಲಿ ತಮಗೆ ಬೇಡವಾದ ತ್ಯಾಜ್ಯ ಪದಾರ್ಥಗಳನ್ನು ನೆಲದ ಮೇಲೆ ಚೆಲ್ಲದೆ ಒಂದು ಬಟ್ಟಲಲ್ಲಿ ಶೇಖರಿಸಿಟ್ಟು ಕಸದ ಬುಟ್ಟಿಗೆ ಹಾಕುವುದು. ವಿದ್ಯಾರ್ಥಿ/ವಿದ್ಯಾರ್ಥಿನಿಯರು ಬೆಳಗ್ಗೆ ಸ್ನಾನ, ಪ್ರಾರ್ಥನೆಯಲ್ಲಿ ತೊಡಗಬೇಕು. ವಿದ್ಯಾರ್ಥಿಗಳು/ವಿದ್ಯಾರ್ಥಿನಿಯರು ಪ್ರಾರ್ಥನಾ ಸಮಯದಲ್ಲಿ ಬಿಳಿ ಪಂಚೆ, ಬಿಳಿ ಚೂಡಿದಾರ ಹಾಗೂ ಕೆಂಪು ವಸ್ತ್ರ ಧರಿಸುವುದು ಕಡ್ಡಾಯವಾಗಿರುತ್ತದೆ. ಯೋಗ ಕ್ಲಾಸ್‌ಗಳಿಗೆ ಹಾಜರಿ ಕಡ್ಡಾಯವಿರುತ್ತದೆ.

4. ನಿಲಯಕ್ಕೆ ಪ್ರವೇಶ ಪಡೆದಂತಹ ವಿದ್ಯಾರ್ಥಿಗಳು ತಮಗೆ ಅವಶ್ಯಕವಾಗಿ ಬೇಕಾದ ಹಾಸಿಗೆ, ಊಟಕ್ಕೆ ಬೇಕಾದ ತಟ್ಟೆ, ಲೋಟ ಇತ್ಯಾದಿಗಳನ್ನು ಹೊಂದಿರಬೇಕು. ವಿದ್ಯಾರ್ಥಿಗಳು ತಾವು ಹೊಂದಿರುವ ಸಾಮಾನು / ಹಣಕ್ಕೆ ತಾವೇ ಸಂಪೂರ್ಣ ಜವಾಬ್ದಾರರು. ವಿದ್ಯಾರ್ಥಿಗಳು ಅಭ್ಯಾಸಿಸುತ್ತಿರುವ ಕೋರ್ಸನ್ನು ಹೊರತುಪಡಿಸಿ ಬೇರೆ ಅನಧಿಕೃತ ವ್ಯಾಸಂಗ ಮಾಡಬಾರದು. ನಿಲಯದಲ್ಲಿ ರಾಜಕೀಯ ಚಟುವಟಿಕೆಗಳನ್ನು ನಿಷೇಧಿಸಿದೆ. ಅನಧಿಕೃತವಾಗಿ ಹಾಸ್ಟೆಲ್‌ನಿಂದ ಹೋದಲ್ಲಿ ಯಾವುದೇ ಅವಘಡಗಳು ಸಂಭವಿಸಿದ್ದಲ್ಲಿ ಸಂಸ್ಥೆಗೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ. ವಿದ್ಯಾರ್ಥಿಗಳು ನಿಲಯದಲ್ಲಿ ಶಿಸ್ತಿನಿಂದ ನಿಶ್ಯಬ್ದವಾಗಿರುವುದನ್ನು ಪಾಲಿಸುವುದು. ವಿದ್ಯಾರ್ಥಿಗಳು ರಾತ್ರಿ 9–00 ಗಂಟೆಯ ನಂತರ ಮೇಲ್ವಿಚಾರಕರ ಅನುಮತಿ ಇಲ್ಲದೆ ನಿಲಯದಿಂದ ಹೊರಹೋಗುವಂತಿಲ್ಲ. ಸಂಜೆ 7–00 ಗಂಟೆಯ ಒಳಗಾಗಿ ನಿಲಯಕ್ಕೆ ಹಿಂದಿರುಗಬೇಕು. ತಡವಾಗಿ ಬರುವ ವಿದ್ಯಾರ್ಥಿಗಳು ಮೊದಲೇ ವ್ಯವಸ್ಥಾಪಕರಿಗೆ ತಿಳಿಸಿ ಅನುಮತಿ ಪಡೆದಿರಬೇಕು. ವಿದ್ಯಾರ್ಥಿಗಳು 7 ದಿನಗಳವರೆಗೆ ಅನಧಿಕೃತ ಗೈರು ಹಾಜರಾದಲ್ಲಿ ಅವರ ಪ್ರವೇಶವನ್ನು ರದ್ದು ಗೊಳಿಸಲಾಗುವುದು. ತಂದೆ/ತಾಯಿ/ಸ್ನೇಹಿತರು ಮತ್ತು ಇತರೆ ಸಂದರ್ಶಕರಿಗೆ ನಿಯಮಿತ ವೇಳೆಯಲ್ಲಿ ಬೆಳಗ್ಗೆ / ಸಂಜೆ ಬಿಟ್ಟು ಉಳಿದ ವೇಳೆಯಲ್ಲಿ ವಿದ್ಯಾರ್ಥಿಗಳನ್ನು ನೋಡಲು ಅವಕಾಶವಿರುವುದಿಲ್ಲ. ಸಂದರ್ಶಕರು ವಿದ್ಯಾರ್ಥಿಗಳನ್ನು ಮೇಲ್ವಿಚಾರಕರ ಕೊಠಡಿಯಲ್ಲಿ ನೋಡಬೇಕೆ ವಿನಃ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳ ಕೊಠಡಿಯನ್ನು ಪ್ರವೇಶಿಸುವಂತಿಲ್ಲ.

5. ಕೊಠಡಿಗಳನ್ನು ನೀಡುವ ಕಾರ್ಯ ನಿಲಯದ ಮೇಲ್ವಿಚಾರಕರಿಗೆ ಸಂಬಂಧಿಸಿದೆ. ಮೇಲ್ವಿಚಾರಕರು ಸಂದರ್ಭಾನುಸಾರ ವಿದ್ಯಾರ್ಥಿಗಳನ್ನು ಬೇರೆ ಕೊಠಡಿಗೆ ವರ್ಗಾಯಿಸುವ ಅಧಿಕಾರ ಹೊಂದಿರುತ್ತಾರೆ. ಪ್ರವೇಶ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಸ್ಟೆಲ್ ಒಳಗೆ – ಹೊರಗೆ ಸನ್ನಡತೆಯಿಂದ ಇರಬೇಕು. ಸಂಸ್ಥೆಗೆ ಸಂಬಂಧಪಟ್ಟವರು ಕೊಠಡಿಗೆ ಭೇಟಿ ನೀಡಿದಾಗ ವಿದ್ಯಾರ್ಥಿಗಳು ತಮಗೆ ನಿಲಯದ ಪ್ರವೇಶದ ಸಮಯದಲ್ಲಿ ವಿತರಿಸಿದ ಗುರುತಿನ ಚೀಟಿಯನ್ನು ತೋರಿಸಬೇಕು. ಗುರುತಿನ ಚೀಟಿಯಲ್ಲಿ ವಿದ್ಯಾರ್ಥಿಗಳು ಅಭ್ಯಾಸಿಸುವ ಕೋರ್ಸನ್ನು ಪರಿಗಣಿಸಿ ವಿದ್ಯಾರ್ಥಿನಿಲಯದಲ್ಲಿರತಕ್ಕ ಅವಧಿಯನ್ನು ನಮೂದಿಸಲಾಗಿರುತ್ತದೆ.

6. ವಿದ್ಯಾರ್ಥಿನಿಲಯದ ಎಲ್ಲ ಸಿಬ್ಬಂದಿಯೊಂದಿಗೆ ಮತ್ತು ಜೆ.ಎ.ಸಿ.ಇ. ಸಂಸ್ಥೆಯ ಎಲ್ಲ ಸಿಬ್ಬಂದಿಯೊಂದಿಗೆ ಹಾಗೂ ಪರಮಸುಖಧಾಮದ ವಯೋವೃದ್ಧರೊಂದಿಗೆ ಅನುಚಿತವಾಗಿ ನಡೆದುಕೊಂಡರೆ ಯಾವುದೇ ಮುಲಾಜಿಲ್ಲದೇ, ತಕ್ಷಣದಿಂದ ವಿದ್ಯಾರ್ಥಿನಿಲಯದಿಂದ ತೆರವು ಮಾಡಿಸಲಾಗುವುದು.

7. ವಸತಿನಿಲಯದಲ್ಲಿರುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಕೋವಿಡ್ –19 ರ ನಿಯಮ ಪಾಲಿಸಬೇಕು, ಮಾಸ್ಕ್ ಧರಿಸುವುದು/ಸ್ಯಾನಿಟೈಸರ್ ಬಳಸುವುದು, ಕೊಠಡಿ ಶುಚಿತ್ವ/ ಕುಡಿಯುವ ನೀರಿನ ಬಾಟಲ್ ವೈಯಕ್ತಿಕ ಬಳಕೆ ಹಾಗೂ 6 ಮೀಟರ್ ಅಂತರ ಕಾಪಾಡಿಕೊಳ್ಳುವುದು ಕಡ್ಡಾಯ.

ವೀರಶೈವ ಲಿಂಗಾಯತ ವಿದ್ಯಾರ್ಥಿಗಳು ಲಿಂಗಧಾರಿಯಾಗಿ, ಪ್ರತಿದಿನ ಸ್ನಾನ ಮಾಡಿ, ವಿಭೂತಿ ಧಾರಣೆ ಮಾಡಿ, ಲಿಂಗ ಪೂಜೆ ಮತ್ತು ಪ್ರಾರ್ಥನೆ ಮಾಡಬೇಕು. ಇತರರು ಪ್ರತಿದಿನ ಸ್ನಾನ ಮಾಡಿ, ಪೂಜೆ ಮತ್ತು ಪ್ರಾರ್ಥನೆ ಮಾಡಬೇಕು. ಶುಚಿತ್ವಕ್ಕಾಗಿ ವಿದ್ಯಾರ್ಥಿಗಳಿಗೆ ಸಂಸ್ಥೆಯು ಹೆಚ್ಚಿನ ಸೌಕರ್ಯವನ್ನು, ಅನುಕೂಲತೆಗಳನ್ನು ಒದಗಿಸಿಕೊಟ್ಟಿದೆ. ನಿಯಮಗಳನ್ನು ಕಾಪಾಡಿಕೊಂಡು ಹೋಗತಕ್ಕದ್ದು. ವೈಯಕ್ತಿಕ ಆಗುಹೋಗುಗಳಿಗೆ ವಿದ್ಯಾರ್ಥಿ/ವಿದ್ಯಾರ್ಥಿನಿಯರೇ ಜವಾಬ್ದಾರರು.

## <u>ಘೋಷಣೆ ಪತ್ರ</u>

**ಹೊರ ಊರುಗಳಿಂದ ವಿದ್ಯಾರ್ಜನೆಗಾಗಿ ಬಂದಂತಹ ನಮಗೆ ಉಚಿತ ವಸತಿ ಹಾಗೂ ಪ್ರಸಾದದ ವ್ಯವಸ್ಥೆಯನ್ನು ಎಂದಿಗೂ ಸ್ಮರಿಸುತ್ತೇವೆ ಹಾಗೂ ಮೇಲ್ಕಂಡ ಎಲ್ಲಾ ನಿಯಮಗಳನ್ನು ಓದಿರುವುದಾಗಿ ಹಾಗೂ ಆ ನಿಯಮಗಳಿಗೆನುಸಾರವಾಗಿ ನಡೆದುಕೊಳ್ಳಲು ಬದ್ಧನಾಗಿರುತ್ತೇನೆ. ಅಲ್ಲದೆ ಸಮಿತಿಯ ಮುಂದೆ ಗೊತ್ತುಪಡಿಸುವ ನಿಯಮಗಳು, ಸಂಸ್ಥೆಯ ಹಾಲಿ ನೀತಿ ನಿಯಮ ಪಾಲಿಸಲು ತಪ್ಪಿದಲ್ಲಿ ನನ್ನ/ನಮ್ಮ ಮೇಲೆ ಸೂಕ್ತ ಕ್ರಮ ಜರುಗಿಸಬಹುದೆಂದು ಒಪ್ಪಿ ಈ ಕೆಳಗೆ ಸಹಿ ಮಾಡಿರುತ್ತೇನೆ.**

ಸಹಿ.........................................................

( )

**ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೆಸರು**